# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 26-03-2021 ಪ್ರಶ್ನೆ ಸಂಖ್ಯೆ : 1966(2062)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 26-03-2021

ಉತ್ತರಿಸುವ ಸಚಿವರು: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ : NAREGA ಯೋಜನೆಯಡಿ ಕೃಷಿ ಹೊಂಡಾ ಕುರಿತು

(ಅ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ, ಬಿಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಬಿಸ್ಕೂರು, ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ, ಬಿಸ್ಕೂರು ಗ್ರಾಮ ಪಂಚಾಯಿತಿ ಬಿಸ್ಕೂರು ವಾರ್ಡ್‌ಗೆ 2018-19, 2019-20 ಹಾಗೂ 2020-21ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ನಿರ್ಮಾಣ ಮಾಡಿರುವ ಕೃಷಿ ಹೊಂಡಾಗಳ ಸಂಖ್ಯೆ ಎಷ್ಟು; ಅದಕ್ಕಾಗಿ ಖರ್ಚಾಗಿರುವ ಅನುದಾನವೆಷ್ಟು;

(ಆ) ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ ಗೋಮಾಳ ಭೂಮಿಯನ್ನು ಬಳಸಿಕೊಂಡಿದ್ದರೂ ಸಹ ಅನುದಾನ ಬಿಡುಗಡೆ ಮಾಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಅಕ್ರಮ ತಡೆಯಲು ಕೈಗೊಂಡ ಕ್ರಮಗಳೇನು; ದಾಖಲಾತಿಗಳನ್ನು ಒದಗಿಸುವುದು;

(ಇ) ಸದರಿ ಬಿಸ್ಕೂರು ವಾರ್ಡ್ ವ್ಯಾಪ್ತಿಯಲ್ಲಿ ಕೃಷಿ ಹೊಂಡಾಗಳಿಗೆ ಸಂಪೂರ್ಣ ಮೊತ್ತ ಬಿಡುಗಡೆಯಾದವರ ವಿವರ ಒದಗಿಸುವುದು;

(ಈ) ಕೃಷಿ ಹೊಂಡಗಳ ಕಾಮಗಾರಿ ಸಂಪೂರ್ಣಗೊಳ್ಳದಿದ್ದರೂ ಸಹ ಹಣ ಬಿಡುಗಡೆ ಮಾತ್ರ ಪೂರ್ಣ ಮಟ್ಟದಲ್ಲಿ ಅಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಗ್ರಾಮವಾರು ವಿವರ ನೀಡುವುದು)